ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಬಳ್ಳಾಪುರ
ಜಿಲ್ಲಾ ನ್ಯಾಯಾಲಯ ಆವರಣ, ಚಿಕ್ಕಬಳ್ಳಾಪುರ-562101
District Legal Services Authority, Chikkaballapura
District Court Complex, Chikkaballapura-562101
E- mail : cbp.dlsa @gmail.com.
Tele Phone No.08156-275080

DLSA No. 264/2025

ರವರಿಗೆ,

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಚಿಕ್ಕಬಳ್ಳಾಪುರ.**

**ಮಾನ್ಯರೇ,**

**ವಿಷಯ:** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಹೊಸದಾಗಿ ಪ್ಯಾನಲ್ ವಕೀಲರನ್ನು ನೇಮಕ ಮಾಡುವ ಪ್ರಕಟಣೆಯನ್ನು ಹೊರಡಿಸಿ ಅರ್ಜಿಯನ್ನು ಆಹ್ವಾನಿಸುವ ಮಾಹಿತಿಯನ್ನು ಜಿಲ್ಲಾ ನ್ಯಾಯಾಲಯದ ಅಂತರ್ಜಾಲದಲ್ಲಿ ವೆಬ್ ಹೊಸ್ಟ್ ಮಾಡುವ ಕುರಿತು.

**ಉಲ್ಲೇಖ:** ಕ.ರಾ.ಕಾ.ಸೇವೆಗಳ ಪ್ರಾಧಿಕಾರದ ಪತ್ರ ಸಂಖ್ಯೆ: ಕ.ರಾ.ಕಾ.ಸೇ.ಪ್ರಾ/01/ Panel Advocate/ 2025/596, ದಿನಾಂಕ: 09.04.2025.

- - - -

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಪ್ಯಾನಲ್ ವಕೀಲರನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಬಳ್ಳಾಪುರ ಇಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿದ ನ್ಯಾಯವಾದಿಗಳಿಂದ ಅರ್ಜಿಯನ್ನು ಆಹ್ವಾನಿಸಲು ಪ್ರಕಟಣೆಯನ್ನು ಹೊರಡಿಸಲಾಗಿದೆ. ಆ ಕಾರಣ ಸದರಿ ಮಾಹಿತಿಯನ್ನು ಜಿಲ್ಲಾ ನಾಯಾಲಯದ ಅಂತರ್ಜಾಲದಲ್ಲಿ ವೆಬ್ ಹೋಸ್ಟ್ ಮಾಡಲು ಈ ಮೂಲಕ ಗೌರವಾನ್ವಿತರಲ್ಲಿ ಅನುಮತಿಯನ್ನು ಕೋರಲಾಗಿದೆ.

Shilpa B 16/4/25

**ಸದಸ್ಯ ಕಾರ್ಯದರ್ಶಿಗಳು**
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಚಿಕ್ಕಬಳ್ಳಾಪುರ

**ಮಾಹಿತಿಗಾಗಿ:-**

ಸಾಫ್ಟ್‌ವೇರ್ ಟೆಕ್ನಿಷಿಯನ್, ಜಿಲ್ಲಾ ನ್ಯಾಯಾಲಯ, ಚಿಕ್ಕಬಳ್ಳಾಪುರ.

# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಬಳ್ಳಾಪುರ

## ಪ್ರಕಟಣೆ

## ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಪ್ಯಾನಲ್ ವಕೀಲರನ್ನು ನೇಮಕಾತಿ ಮಾಡುವ ಕುರಿತು

**ಪ್ರಕಟಣೆ ನಂ. ಜಿ.ಕಾ.ಸೇ.ಪ್ರಾ./ನೇಮಕಾತಿ/266 /2025, ದಿನಾಂಕ: 16.04.2025**

ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ರವರ ಪತ್ರ ಸಂಖ್ಯೆ 01/Panel Advocates/2025/596, ದಿನಾಂಕ : 09/04/2025 ಆದೇಶದಂತೆ ಜಿಲ್ಲಾ ಕಾನೂನು ಪ್ರಾಧಿಕಾರದಲ್ಲಿ ಪ್ಯಾನಲ್ ವಕೀಲರುಗಳನ್ನು ಹೊಸದಾಗಿ ನೇಮಕ ಮಾಡುವ ಹಿನ್ನಲೆಯಲ್ಲಿ (Revamp of Panel Advocate) ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಚಿಕ್ಕಬಳ್ಳಾಪುರದಲ್ಲಿ ಪ್ಯಾನಲ್ ವಕೀಲರುಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

**ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹೊಂದಿರಬೇಕಾದ ಅರ್ಹತೆ:-**

1. ಕನಿಷ್ಠ 3 ವರ್ಷ ಅನುಭವ ಹೊಂದಿರುವ ನ್ಯಾಯವಾದಿಗಳಾಗಿ ಸಿವಿಲ್/ಕ್ರಿಮಿನಲ್ ಪ್ರಕರಣಗಳನ್ನು ನಡೆಸುವ ಅನುಭವ ಹೊಂದಿರಬೇಕು.
2. ಕಾನೂನು ಸೇವಾ ಪ್ರಾಧಿಕಾರದ ನಿಯಮಗಳನ್ನು ತಿಳಿದಿರಬೇಕು.

**ನೇಮಕಾತಿ ವಿಧಾನ:-**

1. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ನಿಯಮ **2010** ರ ನಿರ್ದೇಶನದಂತೆ ನೇಮಕಾತಿ ಅರ್ಹ ಅಭ್ಯರ್ಥಿಗಳ ಸಂದರ್ಶನ ಮತ್ತು ಆಯ್ಕೆಗಾಗಿ ಜಿಲ್ಲಾ ಮಟ್ಟದಲ್ಲಿ ರಚಿಸಲಾದ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದ ಪ್ರಾಧಿಕಾರಿಯ ಮುಂದೆ ಸಂದರ್ಶನಕ್ಕೆ ಹಾಜರಾಗತಕ್ಕದ್ದು .
2. ಸಂದರ್ಶನದ ಸಮಯ ಮತ್ತು ದಿನಾಂಕವನ್ನು ಪತ್ರದ ಮೂಲಕ ತಿಳಿಸಲಾಗುವುದು.

**ಅರ್ಜಿ ಸಲ್ಲಿಸುವ ವಿಧಾನ :-**

1. ನಿಗದಿತ ಅರ್ಜಿ ನಮೂನೆಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, **ಚಿಕ್ಕಬಳ್ಳಾಪುರ** ಕಛೇರಿಯಲ್ಲಿ ಪಡೆಯುವುದು.
2. ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಬಳ್ಳಾಪುರ ಕಛೇರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ನಿಗಧಿ ಪಡಿಸಿದ ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಸಲ್ಲಿಸುವುದು.

**ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸುವುದು.**

1. ವಕೀಲ ವೃತ್ತಿಯಲ್ಲಿ ಕನಿಷ್ಟ 3 ವರ್ಷ ಅನುಭವ ಹೊಂದಿರುವ ಬಗ್ಗೆ ಸಂಬಂಧಪಟ್ಟ ವಕೀಲರ ಸಂಘಗಳ ಅಧ್ಯಕ್ಷರು/ಕಾರ್ಯದರ್ಶಿಗಳಿಂದ ವೃತ್ತಿನಿರತ ಪ್ರಮಾಣಪತ್ರ (Practicing Certificate).
2. ಕರ್ನಾಟಕ ವಕೀಲರ ಪರಿಷತ್ (ಬಾರ್ ಕೌನ್ಸಿಲ್)ನಲ್ಲಿ ವಕೀಲರಾಗಿ ನೊಂದಾವಣೆ ಮಾಡಿಸಿರಬೇಕು ಹಾಗೂ ಅದರ ದೃಢೀಕೃತ ಪ್ರಮಾಣಪತ್ರ.
3. ಕಾನೂನು ಸೇವಾ ಪ್ರಾಧಿಕಾರದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಬಗ್ಗೆ ದಾಖಲೆಗಳನ್ನು ಲಗತ್ತಿಸುವುದು.
4. ಕಾನೂನು ಪದವಿ ಅಂಕಪಟ್ಟಿಗಳ ಧೃಢಿಕೃತ ದಾಖಲಾತಿಗಳು, ಆಧಾರ ಕಾರ್ಡ್ ನ ಪ್ರತಿ ಮತ್ತು ಜಾತಿ ಪ್ರಮಾಣ ಪತ್ರ.
5. ಇತ್ತೀಚಿನ 2 ಪಾಸ್‌ಪೋರ್ಟ ಅಳತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಲಗತ್ತಿಸುವುದು .

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-**

ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ: 02.05.2025 ಸಂಜೆ 05.00 ಗಂಟೆಯ ಒಳಗೆ ಸಲ್ಲಿಸತಕ್ಕದ್ದು ಮತ್ತು ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಅರ್ಜಿ ಸಲ್ಲಿಸಬೇಕಾದ ವಿಳಾಸ:-**

ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಬಳ್ಳಾಪುರ.

**ಅರ್ಜಿ ದೊರೆಯುವ ಸ್ಥಳ:-**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಬಳ್ಳಾಪುರ.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಸೂಚನಾ ಫಲಕದಲ್ಲಿ ಪ್ರಕಟಿಸಿರುವ ಪ್ರಕಟಣೆಯನ್ನು ವೀಕ್ಷಿಸುವುದು ಹಾಗೂ ವಕೀಲರ ಸಂಘ (ರಿ), ಚಿಕ್ಕಬಳ್ಳಾಪುರ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿರುವ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಅಧ್ಯಕ್ಷರು
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಚಿಕ್ಕಬಳ್ಳಾಪುರ

CHAIRMAN
District Legal Services Authority
Chickballapur.

**ಪ್ರತಿಯನ್ನು:-**

1. **ಚಿಕ್ಕಬಳ್ಳಾಪುರ** ಘಟಕದ ಎಲ್ಲಾ ನ್ಯಾಯಾಲಯಗಳ ಸೂಚನಾ ಫಲಕದಲ್ಲಿ ಹಾಕಲು ವಿನಂತಿ.
2. ಅಧ್ಯಕ್ಷರು, ವಕೀಲರ ಸಂಘ **ಚಿಕ್ಕಬಳ್ಳಾಪುರ**ಇವರಿಗೆ ಮತ್ತು ಸದರಿ ಪ್ರಕಟಣೆಯನ್ನು ತಮ್ಮ ಸಂಘದ ನೋಟಿಸ್ ಬೋರ್ಡ್ ಗೆ ಲಗತ್ತಿಸಲು ಕೋರಲಾಗಿದೆ.
3. ವಾರ್ತಾ ಇಲಾಖೆ, **ಚಿಕ್ಕಬಳ್ಳಾಪುರ** ಇವರಿಗೆ ಸದರಿ ಪ್ರಕಟಣೆಯನ್ನು ಸ್ಥಳೀಯ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ.
4. ಕಛೇರಿಯ ಪ್ರತಿ.

ಗೆ,

ಮಾನ್ಯ ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಚಿಕ್ಕಬಳ್ಳಾಪುರ

ಫೋಟೋ

## ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಪ್ಯಾನಲ್ ವಕೀಲರ ನೇಮಕಾತಿಗಾಗಿ ಅರ್ಜಿ

| | | |
|---|---|---|
| 1 | ಅರ್ಜಿದಾರರ ಹೆಸರು: | |
| 2 | ತಂದೆಯ ಹೆಸರು/ಗಂಡನ ಹೆಸರು: | |
| 3 | ವಯಸ್ಸು: | |
| 4 | ವಿಳಾಸ:<br>ಖಾಯಂ ವಿಳಾಸ:<br>ಕಛೇರಿಯ ವಿಳಾಸ: | |
| 5 | ದೂರವಾಣಿ ಸಂಖ್ಯೆ:<br>ಮೊಬೈಲ್ ನಂ: | |
| 6 | ಈ-ಮೇಲ್ ವಿಳಾಸ: | |
| 7 | ವಿದ್ಯಾರ್ಹತೆ: | |
| 8 | ಎನ್‌ರೋಲ್‌ಮೆಂಟ್ ನಂ:<br><br>(ಕರ್ನಾಟಕ ಬಾರ್ ಕೌನ್ಸಿಲ್‌ನಿಂದ ಪಡೆದಿರುವ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು ) | |
| 9 | ವಕೀಲ ವೃತ್ತಿಯ ಅನುಭವ:<br>(ಯಾವ ವಿಭಾಗದಲ್ಲಿ ವಿಶೇಷ ಪರಿಣಿತಿ ಹೊಂದಿರುವ ಬಗ್ಗೆ ಮಾಹಿತಿ ) | |
| 10 | ಜಾತಿ:<br>(ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಜಾತಿ ಪ್ರಮಾಣದ ಪತ್ರ ಲಗತ್ತಿಸಬೇಕು). | |
| 11 | ಭಾಷೆಗಳು:<br>ಓದಲು ಹಾಗೂ ಬರೆಯಲು ಗೊತ್ತಿರುವ ಭಾಷೆಗಳು | |

ಕಾನೂನು ಸೇವಾ ಪ್ರಾಧಿಕಾರದ ನಿಯಮಗಳನ್ನು ತಿಳಿದಿದ್ದು , ಅವುಗಳಿಗೆ ಬದ್ಧಳಾಗಿ/ನಾಗಿ ಅರ್ಜಿ ಸಲ್ಲಿಸುತ್ತಿದ್ದೇನೆ .

ಸ್ಥಳ:- ಸಹಿ.

ದಿನಾಂಕ: - ಅರ್ಜಿದಾರನ/ಳ

<u>ಅರ್ಜಿ ಸಲ್ಲಿಸಲು ನಿಬಂಧನೆಗಳು:-</u>

1. ವಕೀಲ ವೃತ್ತಿಯಲ್ಲಿ ಕನಿಷ್ಠ 3 ವರ್ಷ ಅನುಭವ ಹೊಂದಿರಬೇಕು.
2. ಕರ್ನಾಟಕ ಬಾರ್ ಕೌನ್ಸಿಲ್‌ನಿಂದ ನೊಂದಾವಣಿ ಆಗಿರಬೇಕು ಹಾಗೂ ಅದರ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಬೇಕು .
3. .ಕಾನೂನು ಸೇವಾ ಪ್ರಾಧಿಕಾರದ ನಿಯಮಗಳನ್ನು ತಿಳಿದಿರಬೇಕು .
4. ನಿರ್ಭಂದನೆಗಳನ್ನು ಪಾಲಿಸದೆ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು .